# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 667 |
| ಸದಸ್ಯರ ಹೆಸರು | ಶ್ರೀ ಮಧು ಜಿ.ಮಾದೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | 13.12.2024. |
| ಉತ್ತರಿಸುವವರು | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಭಾಗ್ಯಲಕ್ಷ್ಮೀ/ಸುಕನ್ಯಾ ಸಮೃದ್ಧಿ ಯೋಜನೆಯಡಿ ನೋಂದಾಯಿಸಿದ ಬಿಪಿಎಲ್ ಕುಟುಂಬದ ಪ್ರತಿ ಹೆಣ್ಣು ಮಗುವಿಗೆ 18 ವರ್ಷ ಪೂರೈಸಿದ ಬಳಿಕ ದೊರೆಯುವ ಮೊತ್ತ ಎಷ್ಟು: | ಭಾಗ್ಯಲಕ್ಷ್ಮೀ ಯೋಜನೆಯಡಿ ನೋಂದಾಯಿಸಿದ ಬಿಪಿಎಲ್ ಕುಟುಂಬದ ಪ್ರತಿ ಹೆಣ್ಣು ಮಗುವಿಗೆ, 18 ವರ್ಷ ಪೂರ್ಣ ಗೊಂಡ ನಂತರ ದೊರೆಯುವ ಮೊತ್ತದ ವಿವರ:<br>• 2006-07ರಲ್ಲಿ ನೊಂದಣಿಯಾದವರಿಗೆ 18 ವರ್ಷ ಪೂರೈಸಿದ ನಂತರ ದೊರೆಯುವ ಮೊತ್ತ ರೂ.32,351/-ಗಳು.<br>• 01-08-2008ರ ನಂತರ 2019-20ರವರೆಗೆ ನೊಂದಣಿಯಾದವರಿಗೆ 18 ವರ್ಷ ಪೂರೈಸಿದ ಬಳಿಕ ದೊರೆಯುವ ಅಂದಾಜು ಯೋಜಿತ ಮೊತ್ತ( Projected Value) ರೂ.1.00ಲಕ್ಷಗಳು.<br>• ಭಾಗ್ಯಲಕ್ಷ್ಮೀ/ಸುಕನ್ಯಾ ಸಮೃದ್ಧಿ ಯೋಜನೆಯಡಿ ಖಾತೆ ತೆರೆದ 21 ವರ್ಷ ನಂತರ ದೊರೆಯುವ ಅಂದಾಜು ಮೊತ್ತ ರೂ.1.27 ಲಕ್ಷ. |
| ಆ | ಈ ಪೈಕಿ ಎಷ್ಟು ಮಂದಿ 18 ವರ್ಷ ಪೂರೈಸಿ ಹಣ ಪಡೆಯಲು ಅರ್ಹತೆ ಹೊಂದಿರುತ್ತಾರೆ; ಈವರೆವಿಗೂ ಎಷ್ಟು ಮಂದಿಗೆ ಹಣ ಪಾವತಿಸಲಾಗಿದೆ; ಪಾವತಿಸಲು ಬಾಕಿ ಇದೆ; (ಜಿಲ್ಲಾವಾರು ಮಾಹಿತಿ ನೀಡುವುದು) | ಈ ಪೈಕಿ 2024-25ನೇ ಸಾಲಿನ ಮಾರ್ಚ್- 2025ರ ಅಂತ್ಯಕ್ಕೆ 18 ವರ್ಷ ಪೂರೈಸಿ ಪರಿಪಕ್ವ ಮೊತ್ತ ಪಡೆಯಲು ಅರ್ಹತೆ ಹೊಂದಿರುವವರು ಅಂದಾಜು 2.39ಲಕ್ಷ ಫಲಾನುಭವಿಗಳು.<br>ಭಾಗ್ಯಲಕ್ಷ್ಮೀ ಯೋಜನೆಯಡಿ ಪರಿಪಕ್ವ ಮೊತ್ತವನ್ನು ನೇರವಾಗಿ 18 ವರ್ಷ ಪೂರ್ಣಗೊಂಡ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಪಾವತಿ ಮಾಡುವ ಸಲುವಾಗಿ LIC ಸಂಸ್ಥೆಯವರು ಕೋರಿರುವಂತೆ ಭಾಗ್ಯಲಕ್ಷ್ಮೀ ತಂತ್ರಾಂಶದಲ್ಲಿ Field Create ಮಾಡುವ ಪ್ರಕ್ರಿಯೆಯು ಅಂತಿಮ ಹಂತದಲ್ಲಿದ್ದು, ಪ್ರಕ್ರಿಯೆ ಪೂರ್ಣಗೊಂಡ ನಂತರ ಅರ್ಹರಾದ ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಪರಿಪಕ್ವ ಮೊತ್ತವು, LIC ಸಂಸ್ಥೆಯಿಂದ ಜಮೆಯಾಗುತ್ತದೆ.<br>ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ. |

| | | |
|---|---|---|
| ಇ | ಅರ್ಹರು ಹಣ ಪಡೆಯಲು ಒದಗಿಸಬೇಕಿರುವ ದಾಖಲೆಗಳು ಯಾವುವು ಹಾಗೂ ನಿರ್ದಿಷ್ಟಪಡಿಸಿರುವ ಷರತ್ತುಗಳು ಏನೇನು;(ಸಂಪೂರ್ಣ ವಿವರ ನೀಡುವುದು) | ದಿನಾಂಕ:06-03-2015ರ ಭಾಗ್ಯಲಕ್ಷ್ಮಿ ಯೋಜನೆಯ ಸರಳೀಕರಣದ ಮಾರ್ಗಸೂಚಿಗಳನ್ವಯ ಪರಿಪಕ್ವ ಮೊತ್ತ ಪಡೆಯಲು ಸಲ್ಲಿಸಬೇಕಾದ ದಾಖಲೆಗಳು ಹಾಗೂ ನಿಗದಿಪಡಿಸಿದ ಷರತ್ತುಗಳು ಈ ಕೆಳಗಿನಂತಿವೆ.<br>1. ಮೂಲ ಬಾಂಡ್.<br>2. ಬಿ.ಪಿ.ಎಲ್ ಕಾರ್ಡ್ ಪ್ರತಿ.<br>3. ಜನನ ಪ್ರಮಾಣ ಪತ್ರ.<br>4. ಕುಟುಂಬದಲ್ಲಿ ಮಕ್ಕಳ ಸಂಖ್ಯೆ 2 ಅನ್ನು ಮೀರಿರಬಾರದು. (ದಿ:01-04-2015 ರಿಂದ ಜನಿಸಿದ ಮಕ್ಕಳಿಗೆ ಅನ್ವಯಿಸುವುದು)<br>5. ಕಡ್ಡಾಯವಾಗಿ 8ನೇ ತರಗತಿಯವರೆಗೆ ವ್ಯಾಸಂಗ ಮಾಡಿರಬೇಕು.<br>6. ಬಾಲಕಾರ್ಮಿಕ ನಿಷೇಧ ಕಾಯ್ದೆ, 1986 ರಂತೆ ಬಾಲ ಕಾರ್ಮಿಕಳಾಗಿರತಕ್ಕದ್ದಲ್ಲ.<br>7. 18 ವರ್ಷ ಪೂರೈಸುವ ಮೊದಲು ವಿವಾಹವಾಗಿರಬಾರದು. |
| ಈ | 18 ವರ್ಷದ ಈ ಅವಧಿಯಲ್ಲಿ ಹೆಣ್ಣು ಮಗುವಿನ ಕುಟುಂಬಗಳಲ್ಲಿ ಸಾಮಾಜಿಕ ಮತ್ತು ಆರ್ಥಿಕವಾಗಿ ಸಾಕಷ್ಟು ಏರಿಳಿತಗಳು ಆಗಿದ್ದು, ದಾಖಲೆಗಳನ್ನು ಒದಗಿಸುವುದು ಕಷ್ಟಸಾಧ್ಯವಾಗಿರುವುದರಿಂದ ಯೋಜನೆಯ ಫಲ ಪಡೆಯಲು ಅನುಕೂಲ ಆಗುವಂತೆ ದಾಖಲೆಗಳನ್ನು ಅಗತ್ಯ ಕಡಿಮೆ ಮಾಡಿ ಷರತ್ತುಗಳನ್ನು ಸರಳೀಕರಣಗೊಳಿಸುವ ಕುರಿತು ಸರ್ಕಾರದ ನಿಲುವೇನು? | 18 ವರ್ಷದ ಈ ಅವಧಿಯಲ್ಲಿ ಹೆಣ್ಣು ಮಗುವಿನ ಕುಟುಂಬಗಳಲ್ಲಿ ಸಾಮಾಜಿಕ ಮತ್ತು ಆರ್ಥಿಕವಾಗಿ ಸಾಕಷ್ಟು ಏರಿಳಿತಗಳು ಆಗಿದ್ದು, ದಾಖಲೆಗಳನ್ನು ಒದಗಿಸುವುದು ಕಷ್ಟಸಾಧ್ಯವಾಗಿರುವುದರಿಂದ ಭಾಗ್ಯಲಕ್ಷ್ಮಿ ಯೋಜನೆಯ ದಿ:06-03-2015ರ ಸರಳೀಕರಣದ ಮಾರ್ಗಸೂಚಿಯಲ್ಲಿ ಯೋಜನೆಯ ಸೌಲಭ್ಯ ಪಡೆಯಲು ದಾಖಲಾತಿಗಳನ್ನು ಸರಳೀಕರಣಗೊಳಿಸಲಾಗಿದೆ.<br>1. ಮೂಲ ಬಾಂಡ್ ಕಳೆದು ಹೋಗಿದ್ದಲ್ಲಿ ಜೆರಾಕ್ಸ್ ಬಾಂಡ್ ಜೊತೆಗೆ ಎಫ್.ಐ.ಆರ್ ಪ್ರತಿಯನ್ನು ಲಗತ್ತಿಸಲು ಹಾಗೂ ಬಾಂಡ್ ಜೆರಾಕ್ಸ್ ಪ್ರತಿಯು ಲಭ್ಯವಿಲ್ಲದಿದ್ದ ಪಕ್ಷದಲ್ಲಿ ಭಾಗ್ಯಲಕ್ಷ್ಮಿ ತಂತ್ರಾಂಶದಲ್ಲಿ Display ಆಗುವ ಮಗುವಿನ ವಿವರದ ಪ್ರತಿಗೆ CDPO ದೃಢೀಕರಣ.<br>2. ಫಲಾನುಭವಿಯ ವ್ಯಾಸಂಗ ಪ್ರಮಾಣ ಪತ್ರ, ಬಾಲ ಕಾರ್ಮಿಕಳಾಗದಿರುವ ಬಗ್ಗೆ ಮತ್ತು 18 ವರ್ಷ ಪೂರೈಸುವ ಮೊದಲು ವಿವಾಹವಾಗದಿರುವ ಬಗ್ಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಧೃಡೀಕರಣ ಪತ್ರ.<br>3. ನೇರವಾಗಿ ಫಲಾನುಭವಿಯ ಖಾತೆಗೆ ಪರಿಪಕ್ವ ಮೊತ್ತ ಜಮೆಯಾಗಲು ಅನುವಾಗುವಂತೆ ಚಾಲ್ತಿಯಲ್ಲಿರುವ ಬ್ಯಾಂಕ್ ಅಕೌಂಟ್ ಸಂಖ್ಯೆ ಮತ್ತು ಆಧಾರ್ ಸಂಖ್ಯೆ. |

ಸಂಖ್ಯೆ: ಮಮಇ 240 ಮಮಲ 2024

(ಲಕ್ಷ್ಮೀ ಆರ್.ಹೆಬ್ಬಾಳಕರ್)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರೀಕರ
ಸಬಲೀಕರಣ ಸಚಿವರು

## ಅನುಬಂಧ

| ಕ್ರ.ಸಂ | ಜಿಲ್ಲೆಗಳ ಹೆಸರು | 2024-25ನೇ ಸಾಲಿಗೆ ಪರಿಪಕ್ವ ಮೊತ್ತಕ್ಕೆ ಅರ್ಹರಿರುವ ಫಲಾನುಭವಿಗಳ ಸಂಖ್ಯೆ (ಮಾರ್ಚ್-2025 ಅಂತ್ಯದವರೆಗೆ) |
|---|---|---|
| 1 | ಬಾಗಲಕೋಟೆ | 9073 |
| 2 | ಬೆಂಗಳೂರು ನಗರ | 11513 |
| 3 | ಬೆಂಗಳೂರು ಗ್ರಾ. | 4092 |
| 4 | ಬೆಳಗಾಂ | 19965 |
| 5 | ಬಳ್ಳಾರಿ | 10510 |
| 6 | ಬೀದರ್ | 7554 |
| 7 | ಬಿಜಾಪುರ | 12304 |
| 8 | ಚಾಮರಾಜನಗರ | 5147 |
| 9 | ಚಿಕ್ಕಮಗಳೂರು | 4950 |
| 10 | ಚಿತ್ರದುರ್ಗ | 8883 |
| 11 | ದಕ್ಷಿಣಕನ್ನಡ | 3156 |
| 12 | ದಾವಣಗೆರೆ | 8469 |
| 13 | ಧಾರವಾಡ | 8874 |
| 14 | ಗದಗ | 6881 |
| 15 | ಗುಲ್ಬರ್ಗಾ | 11384 |
| 16 | ಹಾಸನ | 7098 |
| 17 | ಹಾವೇರಿ | 9851 |
| 18 | ಕೊಡಗು | 1355 |
| 19 | ಕೋಲಾರ | 5257 |
| 20 | ಕೊಪ್ಪಳ | 4978 |
| 21 | ಮಂಡ್ಯ | 8923 |

| | | |
|---|---|---|
| 22 | ಮೈಸೂರು | 12027 |
| 23 | ರಾಯಚೂರು | 8827 |
| 24 | ಶಿವಮೊಗ್ಗ | 7722 |
| 25 | ತುಮಕೂರು | 13471 |
| 26 | ಉಡುಪಿ | 3411 |
| 27 | ಉತ್ತರಕನ್ನಡ ಜಿಲ್ಲೆ | 5792 |
| 28 | ರಾಮನಗರ | 5334 |
| 29 | ಚಿಕ್ಕಬಳ್ಳಾಪುರ | 5544 |
| 30 | ಯಾದಗಿರಿ | 7357 |
| **ಒಟ್ಟು** | | **239702** |